**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**
**ಓ ಎಸ್ 48/2019**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ದಿನಾಂಕಃ 22-11-2024 ಪಿ ಡಬ್ಲ್ಯೂ 1**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಎ ವಿ ಎಂ ವಕೀಲರಿಂದಃ**

ನಂಜುಂಡಪ್ಪ ಯಾವಾಗ ತೀರಿಕೊಂಡರು ಎಂದು ನನಗೆ ಗೊತ್ತಿಲ್ಲ. ಸದರಿ ನಂಜುಂಡಪ್ಪ ರವರಿಗೆ ಇಬ್ಬರು ಮಕ್ಕಳು. ಸದರಿಯವರ ಹೆಸರು ಬಸವರಾಜಪ್ಪ ಮತ್ತು ನಾಗರಾಜಪ್ಪ. ಸದರಿಯವರಿಗೂ ಸಹ ನಾನು ನಿಮ್ಮ ತಂದೆ ಕ್ರಯದ ಕರಾರು ಮಾಡಿಕೊಟ್ಟಿದ್ದಾರೆ ಅದರಂತೆ ದಾವಾ ಆಸ್ತಿಯನ್ನು ನೋಂದಾಯಿಸಿ ಕೊಡಿ ಎಂದು ಅವರಿಗೆ ನೋಟೀಸ್ ನೀಡಿಲ್ಲ. ನಂಜುಂಡಪ್ಪ ಜೀವಂತ ಇದ್ದಾಗ ಆಗಲೀ ಅಥವಾ ತೀರಿಕೊಂಡ ನಂತರ ಆಗಲೀ ವಕೀಲರ ಮೂಲಕ ಈ ರೀತಿ ನೋಟಿಸ್ ನೀಡಲು ತೊಂದರೆ ಇರಲಿಲ್ಲ ಎಂದರೆ ಸರಿ. ದಾವಾ ಆಸ್ತಿ ನನ್ನ ಸ್ವಾಧೀನದಲ್ಲಿದೆ ಎಂದು ತೋರಿಸಲು ಇಲ್ಲಿಯವರೆಗೆ ಯಾವುದೇ ದಾಖಲೆಯನ್ನು ಸಲ್ಲಿಸಿಲ್ಲ. ದಾವಾ ಆಸ್ತಿಯಲ್ಲಿ ನಾನು ದನದ ಕೊಟ್ಟಿಗೆಯನ್ನು ಕ್ರಯದ ಕರಾರು ಆದ 10 ವರ್ಷಗಳ ತರುವಾಯ ಕಟ್ಟಿರುತ್ತೇನೆ. ಈ ರೀತಿ 10 ವರ್ಷಗಳ ತರುವಾಯ ದನದ ಕೊಟ್ಟಿಗೆ ಕಟ್ಟಿದ ಬಗ್ಗೆ ದಾವೆಯಲ್ಲಿ ಹಾಗೂ ನನ್ನ ಅರ್ಜಿಯಲ್ಲಿ ಹಾಗೂ ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿಲ್ಲ ಎಂದರೆ ಸರಿ. ನಾನು ದಾವಾ ಆಸ್ತಿಯನ್ನು ಸಿಮೆಂಟ್ ಶೀಟ್ ಹಾಕಿ ದನದ ಕೊಟ್ಟಿಗೆಯನ್ನು ಕಟ್ಟಿದ ಬಗ್ಗೆ ಹಾಗೂ ದನಗಳನ್ನು ಸಾಕಿದ ಬಗ್ಗೆ ಯಾವುದೇ ಛಾಯ ಚಿತ್ರಗಳನ್ನು ಸಲ್ಲಿಸಿಲ್ಲ. ದಾವಾ ಸಲ್ಲಿಸುವ ಪೂರ್ವದಲ್ಲಿ ದನದ ಕೊಟ್ಟಿಗೆ ಇದ್ದ ಬಗ್ಗೆ ಹಾಗೂ ಅದು ಬಿದ್ದ ಬಗ್ಗೆ ಯಾವ ದಾಖಲೆಗಳನ್ನು ಸಲ್ಲಿಸಿಲ್ಲ ಎಂದರೆ ಸಾಕ್ಷಿಯು ನಾನು ಊರು ಬಿಟ್ಟು ಹೋದ ಕಾರಣ ಸಲ್ಲಿಸಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಊರು ಬಿಟ್ಟು ಹೋದ ವರ್ಷ, ತಿಂಗಳು ನನಗೆ ನೆನಪಿಲ್ಲ. ನಾನು ಊರು ಬಿಟ್ಟು ಹೋದ ಬಗ್ಗೆ ಅರ್ಜಿಯಲ್ಲಿ ಬರೆಸಿಲ್ಲ. ನನ್ನ ದನದ ಕೊಟ್ಟಿಗೆ ಬಿದ್ದು ಹೋದ ಬಗ್ಗೆ ನಾನು ತಹಶೀಲ್ದಾರ ಕಚೇರಿಗೆ ಯಾವುದೇ ಅರ್ಜಿ ಸಲ್ಲಿಸಿಲ್ಲ. ಈ ದಾವೆಯನ್ನು ದಾವಾ ಆಸ್ತಿಯ ಸಲುವಾಗಿ ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. ಈ ದಾವೆಯಲ್ಲಿ ದಾವಾ ಆಸ್ತಿಯನ್ನು ನನಗೆ ನೀಡಬೇಕು ಎಂದು ಸಲ್ಲಿಸಿರುತ್ತೇನೆ.

ಪ್ರತಿವಾದಿ 1 ರಿಂದ 6 ರವರನ್ನು ಯಾವ ಕಾರಣಕ್ಕಾಗಿ ಪಕ್ಷಗಾರರನ್ನಾಗಿ ಮಾಡಿರುತ್ತೀರಿ ಎಂದರೆ ಸಾಕ್ಷಿಯು ಪ್ರತಿವಾದಿ 1 ರವರು ಪ್ರತಿವಾದಿ 5 ರವರಿಗೆ ಮಾರಾಟ ಮಾಡಿದ್ದರಿಂದ ಅವರನ್ನು ಪಕ್ಷಗಾರರನ್ನಾಗಿ ಮಾಡಿದ್ದೇನೆ. ನಂಜುಂಡಪ್ಪನವರ ಜಮೀನಿನಲ್ಲಿ ಎಷ್ಟು ಸೈಟುಗಳನ್ನು ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ದಾವೆಯನ್ನು ಸಲ್ಲಿಸುವ ಕಾಲಕ್ಕೆ ದಾವಾ ಆಸ್ತಿ ಪ್ರತಿವಾದಿ 1 ರವರ ಸ್ವಾಧೀನದಲ್ಲಿ ಇತ್ತು. ದಾವಾ ಆಸ್ತಿ ಪೂರ್ವಕ್ಕೆ ಸೈಟು ನಂ. 11, ಪಶ್ಚಿಮಕ್ಕೆ ಗೊತ್ತಿಲ್ಲ, ಉತ್ತರಕ್ಕೆ ಗೊತ್ತಿಲ್ಲ ಮತ್ತು ದಕ್ಷಿಣಕ್ಕೆ ಗೊತ್ತಿಲ್ಲ. ನಂಜುಂಡಪ್ಪ ತಮ್ಮ ಸರ್ವೆ ನಂ. 18/ಎ1 ಜಮೀನಿನಲ್ಲಿ ಸೈಟಗಳನ್ನು ಮಾಡಿರುತ್ತಾರೆ ಎಂದರೆ ಸರಿ. ಸದರಿ ಸೈಟುಗಳನ್ನು ಸೈಟ್ ನಂ. 11 ಮತ್ತು 30 ಎಂದು ಮಾಡಿದ್ದರು ಎಂದರೆ ಸರಿ. ಸದರಿ ಸೈಟುಗಳು ಶೇರಾಪುರ ಗ್ರಾಮದ ಹನಗವಾಡಿ ಗ್ರಾಮ ಪಂಚಾಯ್ತಿಗೆ ಸೇರಿದ್ದವು ಎಂದರೆ ಸರಿ. ಸದರಿ ಸೈಟ್ ನಂ. 11 ನ್ನು 1 ನೇ

ಪ್ರತಿವಾದಿಗೆ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು 1 ನೇ ಪ್ರತಿವಾದಿಯ ವಿರುದ್ಧ ಮಾತ್ರ ದಾವೆಯನ್ನು ಸಲ್ಲಿಸಿರುತ್ತೇನೆ. ಪ್ರತಿವಾದಿಯರು ಏನು ತಕರಾರು ಸಲ್ಲಿಸಿದ್ದಾರೆ ಎಂದು ತಿಳಿದುಕೊಂಡಿಲ್ಲ. ನಂಜುಂಡಪ್ಪ ಸೈಟ್ ನಂ. 11 ನ್ನು ತನ್ನ ಮಗ 1 ನೇ ಪ್ರತಿವಾದಿ ಬಸವರಾಜಪ್ಪ ರವರಿಗೆ ನೀಡಿದ್ದಾರೆ ಎಂದರೆ ಸರಿ. ಅದರಂತೆ 1 ನೇ ಪ್ರತಿವಾದಿ ಹೆಸರಿಗೆ ಸೈಟ್ ನಂ. 11 ರ ಖಾತೆಯಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಹನಗವಾಡಿ ಗ್ರಾಮ ಪಂಚಾಯ್ತಿ 2015–16 ನೇ ಸಾಲಿನಲ್ಲಿ ಹರಿಹರ ನಗರಕ್ಕೆ ಸೇರಿದೆ ಎಂದರೆ ಸರಿ. ಅದರಂತೆ ಹರಿಹರ ನಗರಸಭೆಯವರು ಪ್ರತಿವಾದಿ 1 ರವರ ಹೆಸರಿಗೆ ಖಾತೆಯನ್ನು ಮಾಡಿ ಅಸೆಸ್ ಮೆಂಟ್ ನಂಬರ್ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 1 ರಿಂದ 4 ನೇ ಪ್ರತಿವಾದಿ ಸೈಟ್ ನಂ. 11 ರಲ್ಲಿ 15 X 40 ಅಡಿ ಜಾಗೆಯನ್ನು 6 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಖರೀದಿ ಆದ ದಿನವೇ 6 ನೇ ಪ್ರತಿವಾದಿ ಸದರಿ ಜಾಗೆಯ ಸ್ವಾದೀನತೆಯನ್ನು ಪಡೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಸೈಟ್ ನಂ. 11 ರಲ್ಲಿ ಉಳಿದ ಪಶ್ಚಿಮಾರ್ಧ ಭಾಗವನ್ನು 5 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. 5 ನೇ ಪ್ರತಿವಾದಿಯೇ ಸದರಿ ಆಸ್ತಿಯ ಸ್ವಾದೀನತೆ ಹೊಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 5 ಮತ್ತು 6 ನೇ ಪ್ರತಿವಾದಿಯರು ತಾವು ಖರೀದಿಸಿದ ಜಾಗೆಯಲ್ಲಿ ಮನೆಯನ್ನು ಕಟ್ಟಲು ತಲಾ 73,500/– ರೂಗಳನ್ನು ಪೌರಾಯುಕ್ತರು ಕೆ ಎಸ್ ಡಿ ಬಿ ಯವರಿಗೆ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದರಂತೆ ಪರವಾನಿಗೆ ಪಡೆದು ತಾವು ಖರೀದಿಸಿದ ಜಾಗೆಯಲ್ಲಿ ಮನೆಯನ್ನು ಸಹ ಕಟ್ಟಿದ್ದಾರೆ ಎಂದರೆ ಸಾಕ್ಷಿಯು ಬೇರೆ ಜಾಗದಲ್ಲಿ ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಕೆಲವು ಛಾಯ ಚಿತ್ರಗಳನ್ನು ತೋರಿಸಲಾಗಿ ಅವು 5 ಮತ್ತು 6 ನೇ ಪ್ರತಿವಾದಿಯರು ಮನೆ ಕಟ್ಟಿರುವ ಛಾಯ ಚಿತ್ರಗಳು ಎಂದರೆ ಸಾಕ್ಷಿಯು ಗುರುತಿಸಲು ನಿರಾಕರಿಸಿರುತ್ತಾರೆ. ದಾವೆಯನ್ನು ಸಲ್ಲಿಸಿದ ನಂತರ ನಾನು ದಾವಾ ಆಸ್ತಿಯನ್ನು ಹೋಗಿ ನೋಡಿಲ್ಲ. ಪ್ರತಿವಾದಿ 5 ಮತ್ತು 6 ರವರು ದಾವಾ ಆಸ್ತಿಯಲ್ಲಿ ಮನೆ ಕಟ್ಟಿಕೊಂಡು ತಮ್ಮ ಕುಟುಂಬದೊಂದಿಗೆ ವಾಸವಾಗಿದ್ದಾರೆ ಎಂದರೆ ಸಾಕ್ಷಿಯು ನನ್ನ ಆಸ್ತಿ ಅಲ್ಲ ಎಂದು ನುಡಿಯುತ್ತಾರೆ. ನನ್ನ ಸೈಟು ಖಾಲಿ ಇದೆ ಎಂದು ತೋರಿಸಲು ಯಾವ ದಾಖಲೆಯನ್ನು ಸಲ್ಲಿಸಿದ್ದೀರಿ ಎಂದರೆ ಸಾಕ್ಷಿಯು ನಿಪಿ.3 ಕ್ರಯದ ಕರಾರು ಪತ್ರವನ್ನು ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ. ದಾವಾ ಆಸ್ತಿ ಖಾಲಿ ಇದೆ ತೋರಿಸಲು ಛಾಯ ಚಿತ್ರಗಳನ್ನು ಸಲ್ಲಿಸಲು ತೊಂದರೆ ಇಲ್ಲ ಎಂದರೆ ಸಾಕ್ಷಿಯು ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ. ಈ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂಜುಂಡಪ್ಪ ನನಗೆ ದಾವಾ ಆ್ತಯನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಪಿ.2 ನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಅಸ್ತಿತ್ವದಲ್ಲಿ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 5 ಮತ್ತು 6 ರವರು ತಕರಾರು ಅರ್ಜಿ ಸಲ್ಲಿಸಿ ಸೈಟ್ ನಂ. 11 ಖಾನೇಶುಕುಮಾರಿ ನಂ. 67/11 ಎಂದು ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿ ಪೂರ್ವಕ್ಕೆ ಸೈಟು ನಂ. 12, ಪಶ್ಚಿಮಕ್ಕೆ ಸೈಟ್ ನಂ. 10, ಉತ್ತರಕ್ಕೆ ಖಾಸಗಿ ಆಸ್ತಿ ಮತ್ತು ದಕ್ಷಿಣಕ್ಕೆ ರಸ್ತೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯರು ಎಲ್ಲಾ ದಾಖಲೆಗಳನ್ನು ಸಲ್ಲಿಸಿದ್ದರೂ ಮತ್ತು ಈ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯವರ ವಿರುದ್ಧ ಯಾವುದೇ ಕಾನೂನು ಕ್ರಮ ತೆಗೆದುಕೊಂಡಿಲ್ಲ. ದಾವಾ ಆಸ್ತಿ ಅಸ್ತಿತ್ವದಲ್ಲಿ ಇಲ್ಲದಿದ್ದರೂ ಸಹ ಹಳೆ ಕ್ರಯದ ಕರಾರು ಪತ್ರ ಸಲ್ಲಿಸಿ ಪ್ರತಿವಾದಿಯವರ ವಿರುದ್ಧ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ಹರಿಹರ